**ಸಿ.ಸಿ ನಂ.28/2015**

ಪಿ ಡಬ್ಲ್ಯೂ-1

**ದಿನಾಂಕ 10.01.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ.**

ನನ್ನ ಗಂಡ ಹೃದಯಘಾತದಿಂದ ಮರಣ ಹೊಂದಿರುತ್ತಾರೆ. ಅದಕ್ಕೆ ಸಂಬಂದಿಸಿದ ದಾಖಲೆಗಳು ಇರುವುದಿಲ್ಲ. ನನ್ನ ಮಾವ ಮತ್ತು ಅವರ ಮಕ್ಕಳು ಇನ್ನೂ ಒಟ್ಟು ಕುಟುಂಬದಲ್ಲೆ ವಾಸ ಮಾಡುತ್ತಿದ್ದಾರೆ ಎಂದರೆ ಗೊತ್ತಿಲ್ಲ. ನಾನು ಚಿಕ್ಕ ಕರೆಯೂರು ಗ್ರಾಮದಲ್ಲಿದ್ದಾಗ ಅಕ್ರಮ ಸಂಬಂಧ ಇದ್ದು, ಯಾರಾದರೂ ನಮ್ಮ ಮನಗೆ ಬಂದರೆ ನನ್ನ ಮಾವ ಅದನ್ನು ಪ್ರತಿಭಟಿಸುತ್ತಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನನಗೆ ನನ್ನ ಮಾವನ ಮೇಲೆ ದ್ವೇಷ ಇತ್ತು ಎಂದರೆ ಸರಿಯಲ್ಲ. ಟ್ರಾಕ್ಟರ್ ಅನ್ನು ಚಾಲಕ ಮತ್ತು ನನ್ನ ಗಂಡ ಓಡಿಸುತ್ತಿದ್ದರು. ಚಾಲಕರ ಹೆಸರು ಗೊತ್ತಿಲ್ಲ. ವಿಂಗರ್ ಮತ್ತು ಮಾರುತಿ ವ್ಯಾನನ್ನು ಚಾಲಕರು ಓಡಿಸುತ್ತಿದ್ದರು. ಸದರಿ ವಿಚಾರವನ್ನು ದೂರಿನಲ್ಲಿ ಹೇಳಿರುವುದಿಲ್ಲ. ಸದರಿ ದ್ವಿ ಚಕ್ರ ವಾಹನವನ್ನು ಹೇಮ ರವರಿಗೆ ಗುರುಸ್ವಾಮಿಯವರು ಕೊಡಿಸಿದ್ದರು ಎಂದರೆ ಸರಿಯಲ್ಲ. ಸದರಿ ಗುರುಸ್ವಾಮಿಯವರು ನನ್ನ ಗಂಡನಿಗೆ 1 ಲಕ್ಷ ಹಣ ಕೊಟ್ಟಿದ್ದರು ಎಂದರೆ ಸರಿಯಲ್ಲ.

ದ್ವಿ ಚಕ್ರ ವಾಹನದ ನಂಬರ್ ಕೆ ಎ 45 ಇ 7054 ನನ್ನ ಗಂಡನ ಬಳಿ ಇತ್ತು. ಸದರಿ ದ್ವಿ ಚಕ್ರ ವಾಹನ ನನ್ನ ಮಾವನ ಮನೆಯಲ್ಲಿತ್ತು ಎಂದರೆ ಸರಿಯಲ್ಲ. ಸದರಿ ಎಲ್ಲಾ ವಾಹನಗಳಿಗೂ ನನ್ನ ಮಾವ ಮಾಲೀಕರಾಗಿದ್ದರೆ ಎಂದರೆ ಸರಿಯಲ್ಲ. ದಿನಾಂಕ 10.03.2014 ರಂದು 5 ನೇ ಆರೋಪಿ ಹ್ಯಾಂಡ್ ಪೋಸ್ಟ್ ಬಳಿ ಬಂದಿದ್ದರು. ಸದರಿ ದಿನ 5 ನೇ ಆರೋಪಿ ಎಂ ಎಸ್ ಡಬ್ಲ್ಯೂ ಓದುತ್ತಿದ್ದು ಕಾಲೇಜಿನಲ್ಲಿ ಇದ್ದರು ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಗಲಾಟೆ ಮಾಡಿರುವುದಿಲ್ಲ ಮತ್ತು ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 7 ಅನ್ನು 2015 ರಲ್ಲಿ ಪಡೆದುಕೊಂಡಿರುತ್ತೇನೆ. ನಿಪಿ 7 ಅನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಪಡಿತರ ಚೀಟಿಯನ್ನು ತೋರಿಸಿದ್ದು ಅದು ನಮ್ಮ ಕುಟುಂಬದ್ದೆ ಎಂದು ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಯನ್ನು ನಿಡಿ 2 ಎಂದು ಗುರುತಿಸಲಾಯಿತು. ಪ್ರತಿ ತಿಂಗಳು ಪಡೀತರ

ಪಡೆದುಕೊಂಡರೆ ಅದು ಪಡೀತರ ಚೀಟಿಯಲ್ಲಿ ನಮೂದಾಗಿರುತ್ತದೆ ಎಂದರೆ ಸರಿ ಆ ರೀತಿ ನಿಪಿ 7 ರಲ್ಲಿ ನಮೂದಾಗಿಲ್ಲ ಎಂದರೆ ಗೊತ್ತಿಲ್ಲ. ನನ್ನ ಗಂಡನ ಸಂಸ್ಕಾರಕ್ಕೆ ಬಂದಿರಲಿಲ್ಲ ಎಂದರೆ ಕರೆದಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ದ್ವೇಷದಿಂದ ಸುಳ್ಳು ಪಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಬಾಡಿಗೆ ಮನೆ ಮಾಡಿಕೊಂಡಿರುವ ಬಾಡಿಗೆ ಕರಾರು ಪತ್ರವನ್ನು ಹಾಜರುಪಡಿಸಿರುವುದಿಲ್ಲ. ಸದರಿ ಮನೆ ಬಳಿ ಯಾವುದಾದರು ಸಣ್ಣ ಪುಟ್ಟ ಗಲಾಟೆ ಯಾದರೆ ಮಾಲೀಕರು ತಕ್ಷಣ ಬರುತ್ತಾರೆ ಎಂದರೆ ಆ ದಿನ ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನನ್ನ ದೂರಿನಲ್ಲಿ ಬರೆಸಿರುತ್ತೇನೆ. ಸದರಿ ದಿನ ಆರೋಪಿಗಳು ಅಕ್ರಮ ಪ್ರವೇಶ ಮಾಡದಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿ. ದಿನಾಂಕ 11.03.2014 ರಂದು ನನ್ನ ತಂದೆಗೆ ಕರೆ ಮಾಡಿ ಕರೆಸಿಕೊಂಡಿರುತ್ತೇನೆ. ನನ್ನ ತಂದೆಯ ಮೊಬೈಲ್ ಸಂಖ್ಯೆಯನ್ನು ದೂರಿನಲ್ಲಿ ನಮೂದಿಸಿರುವುದಿಲ್ಲ. ಆ ರೀತಿ ಬರೆಸಲು ತೊಂದರೆ ಇರಲಿಲ್ಲ. ಚಾಸಾ-2 ರಿಂದ 4 ರವರು ಸಂಬಂದಿಕರು ಎಂದರೆ ಸರಿ.

ಸಾಮಾನ್ಯವಾಗಿ ಗಲಾಟೆಯಾದರೆ ಸಾಕಷ್ಟು ಜನ ಸೇರಿರುತ್ತಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಸದರಿ ಗಲಾಟೆಯಾದ ದಿನ ಎಷ್ಟು ಜನ ಸೇರಿದ್ದರು ಎಂದು ದೂರಿನಲ್ಲಿ ಬರೆಸಿಲ್ಲ. ನನ್ನ ಚಿಕ್ಕಪ್ಪ ರವರನ್ನು ಕರೆದು ಕೊಂಡು ದ್ವಿ ಚಕ್ರ ವಾಹನದಲ್ಲಿ ಚಿಕ್ಕ ಕೆರೆಯೂರಿಗೆ ಹೋಗಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಿನಾಂಕ 11.03.2014 ರಂದು ಸುಮಾರು 11 ಗಂಟೆ ಸಮಯಕ್ಕೆ ಚಿಕ್ಕ ಕೆರೆಯೂರು ಗ್ರಾಮಕ್ಕೆ ಹೋಗಿರುತ್ತೇನೆ. ಸದರಿ ದಿನ ಆರೋಪಿತರು ತಲೆ ಜುಟ್ಟು ಹಿಡಿದು ಎಳೆದಾಡಿರುವುದಿಲ್ಲ ಮತ್ತು ಯಾವುದೇ ಗಲಾಟೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ ಮತ್ತು ಗಾಡಿ ಗೂಟದಿಂದ ಹೊಡೆಯಲು ಪ್ರಯತ್ನ ಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಒಂದು ಎತ್ತಿನ ಗಾಡಿಗೆ ಒಟ್ಟು 12 ಗೂಟಗಳು ಇರುತ್ತವೆ ಅದರಲ್ಲಿ ಯಾವ ಗೂಟದಿಂದ ಹೊಡೆಯಲು ಪ್ರಯತ್ನ ಪಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಸದರಿ ವಿಚಾರವಾಗಿ ಹೆಚ್.ಡಿ. ಕೋಟೆ ಪೋಲೀಸ್ ಠಾಣೆಗೆ ದೂರು ಕೊಟ್ಟಿರುತ್ತೇನೆ. ಸದರಿ ವಿಚಾರವನ್ನು ದೂರಿನಲ್ಲಿ ಹೇಳಿರುತ್ತೇನೆ. ಆರೀತಿ ದೂರು ಕೊಡದಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರಿಂದ ಪಾಟೀ ಸವಾಲಿಗೆ  ಆರೋಪಿತರ ಪರ  ವಕೀಲರು ಸಮಯವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**